65 ಶ್ರೀ ರೋಷನ್ ಬೇಗ್ ಆರ್.(ಶಿವಾಜಿನಗರ)
ಮಾನ್ಯ ಅಬಕಾರಿ, ವಾರ್ತಾ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಗ್ಯಾಂಗ್‌ಮನ್‌ಗಳ ಕೊರತೆಯಿರುವುದು ನಿಜವಲ್ಲವೇ;

ಹೌದು

ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಪ್ರಸ್ತುತ ಮಂಡಳಿಯ ದೈನಂದಿನ ವಾಲ್ವ್‌ಮನ್ ಕೆಲಸ ನಿರ್ವಹಿಸುವ ಸಂಬಂಧ ಭದ್ರತಾ ಸೇವಾ ಸಂಸ್ಥೆಯಿಂದ ವಾಲ್ವ್‌ಮನ್ ಕೆಲಸಕ್ಕಾಗಿ ಸಿಬ್ಬಂದಿಗಳನ್ನು ಪಡೆಯಲಾಗಿದೆ. 193 ವಾಲ್ವ್‌ಮನ್ ಹುದ್ದೆಗಳ ಭರ್ತಿಗಾಗಿ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

67 ಶ್ರೀ ಮಹದೇವ ಪ್ರಸಾದ ಹೆಚ್.ಎಸ್
ಜಿ.ಜನಾರ್ಧನ ರೆಡ್ಡಿ(ಪ್ರವಾಸೋದ್ಯಮ ಹಾಗೂ ಮೂಲ ಸೌಲಭ್ಯ ಸಚಿವರು)

ಅ) ಶ್ರೀ ಮಲೈಮಹದೇಶ್ವರ ಬೆಟ್ಟಕ್ಕೆ ಅತಿ ಗಣ್ಯರು ಹಾಗೂ ಗಣ್ಯ ವ್ಯಕ್ತಿಗಳು ಭೇಟಿ ನೀಡಲು ಹೆಲಿಪ್ಯಾಡ್ ನಿರ್ಮಾಣ ಮಾಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ;

ಇಲ್ಲ

ಆ) ಹಾಗಿದ್ದಲ್ಲಿ, ಹೆಲಿಪ್ಯಾಡ್ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

69 ಶ್ರೀ ಮಹದೇವಪ್ರಸಾದ.ಹೆಚ್.ಎಸ್ (ಗುಂಡ್ಲುಪೇಟೆ)
ಜಿ.ಜನಾರ್ಧನ ರೆಡ್ಡಿ(ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಅ) ಚಾಮರಾಜನಗರ ಜಿಲ್ಲೆಯ ಪ್ರವಾಸಿ ಕೇಂದ್ರಗಳಿಗೆ ಮೂಲ ಸೌಕರ್ಯ ಒದಗಿಸಿ ಅಭಿವೃದ್ಧಿಪಡಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಸರ್ಕಾರ ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?

ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯ ಅಂಗವಾಗಿ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ಬಿಳಿಗಿರಿರಂಗನ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣ ಮಾಡಲು 2007–08ನೇ ಸಾಲಿನಲ್ಲಿ ರೂ.100.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಬಿಡುಗಡೆ ಮಾಡಲಾಗಿದೆ.
2. ಮಲೈಮಹದೇಶ್ವರ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕಾಗಿ 2007–08ನೇ ಸಾಲಿನಲ್ಲಿ ರೂ.100.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಬಿಡುಗಡೆ ಮಾಡಲಾಗಿದೆ.
3. ಚಾಮರಾಜನಗರ ಜಿಲ್ಲೆಯ ಬಂಡೀಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಾಗೂ ಮಧ್ಯರಂಗದ ರಂಗನಾಥಸ್ವಾಮಿ ದೇವಾಲಯಗಳ ಬಳಿ ತಲಾ ರೂ.12.70ಲಕ್ಷಗಳ ವೆಚ್ಚದಲ್ಲಿ ಶೌಚಾಲಯಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ.
4. ಚಾಮರಾಜನಗರ ಜಿಲ್ಲೆಯ ಹೊಗೆನಕಲ್ ಜಲಪಾತ ಪ್ರದೇಶದಲ್ಲಿ ಸ್ನಾನಗೃಹಗಳು, ಶೌಚಾಲಯ, ಬಟ್ಟೆ ಬದಲಿಸುವ ಕೋಣೆಗಳು, ವಾಹನ ನಿಲ್ದಾಣ, ಪರಗೋಲಗಳ ನಿರ್ಮಾಣ, ಇಂಟರ್ ಪ್ರಿಟೇಷನ್ ಸೆಂಟರ್, ಉಪಹಾರಗೃಹಗಳ ನಿರ್ಮಾಣ, ಬೋಟಿಂಗ್ ಸೌಲಭ್ಯ ಒದಗಿಸಲು ಫ್ಲಾಟ್ ಫಾರಂ ನಿರ್ಮಾಣ, ವಾಚ್ ಟವರ್ ನಿರ್ಮಾಣ, ತಂತಬೇಲಿ ನಿರ್ಮಾಣ, ಪ್ರವಾಸಿ ಮಾರ್ಗದರ್ಶಿಫಲಕಗಳು ಹಾಗೂ ಟ್ರಕ್ಕಿಂಗ್ ಟ್ರಯಲ್ಸ್ ಅಭಿವೃದ್ಧಿಪಡಿಸಲು ರೂ.50.00ಲಕ್ಷಗಳನ್ನು 2008–09ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.
5. ಚಾಮರಾಜನಗರ ಜಿಲ್ಲೆಯ ಕರಿವರದರಾಜ ಬೆಟ್ಟದಲ್ಲಿ ರೂ.30.00 ಲಕ್ಷಗಳಲ್ಲಿ ಪ್ರವಾಸಿ ಸೌಲಭ್ಯವನ್ನು ಒದಗಿಸಲು ಪರಿಶೀಲಿಸಲಾಗುತ್ತಿದೆ.
6. ಚಾಮರಾಜನಗರ ಜಿಲ್ಲೆಯ ಶಿವನಸಮುದ್ರದ ಮಧ್ಯರಂಗ ದೇವಾಲಯದ ಬಳಿ ರೂ. 56.42ಲಕ್ಷಗಳಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕೆ ಪ್ರಸ್ತಾವನೆ ಪರಿಶೀಲಿಸಲಾಗುತ್ತಿದೆ.

70 ಶ್ರೀ ಮಹದೇವ ಪ್ರಸಾದ ಹೆಚ್.ಎಸ್.
ಡಾ॥ವಿ.ಎಸ್.ಆಚಾರ್ಯ (ಗೃಹ ಸಚಿವರು)

1) ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ, ಬೇಗೂರು ಗ್ರಾಮದ ಔಟ್ ಪೋಸ್ಟ್ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ.

ಹೌದು

2) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದಜೇಗೇರಿಸುವ ಪ್ರಸ್ತಾವಣೆಗಳನ್ನು ಪರಿಗಣಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಲು ನಿವೃತ್ತ ಡಿ.ಜಿ.ಪಿ. ಶ್ರೀ.ಎಸ್.ಮರೀಸ್ವಾಮಿ ಇವರ